ಅಕ್ಕಿ ಕಾಳುಗಳು ದೊರೆತವು. ಅದನ್ನು ಜೋಪಾನವಾಗಿ ಹೆಕ್ಕಿ ತಂದಿತು. ತೊಳೆದು ಪುನಃ ಮರಿಗಳನ್ನು ಕರೆಯಿತು. 'ಬನ್ನಿ ಮರಿಗಳೇ, ಅರೆಯುವ ಕಲ್ಲು ತೊಳೆದು ಕೊಡಿ. ಎಲ್ಲರೂ ಸೇರಿ ಮಾಡಿದರೆ ಬೇಗ ಆಗುತ್ತದೆ. ಹಿರಿಯ ಮರಿಗಳು ಅಕ್ಕಿ ಅರೆಯಿರಿ ನಯವಾಗಿ. ಪುಟ್ಟ ಕಂದಗಳು ತೊಳೆದು ಕೊಡಲಿ. ಹೂಂ , ಬೇಗ' ಎಂದಿತು. 'ಅಮ್ಮಾ, ಯಾಕೋ ಕಾಲು ನೋವು, ಅಯ್ಯಯ್ಯಮ್ಮ, ಸ್ವಲ್ಪ ಸುಸ್ತು ನನಗೆ, ಅರೆ ಅಮ್ಮ ನನಗೆ ಸ್ವಲ್ಪ ತಲೆ ನೋವು, ನನಗೆ ತುಸು ಹೊಟ್ಟೆ ಸಂಕಟ, ನನ್ನ ಕಾಲು ಸೆಳೆತ' ಎನ್ನುತ್ತ ಮರಿಗಳೆಲ್ಲ ದಿಕ್ಕಾಪಾಲಾಗಿ ಓಡಿದವು.

ಅಮ್ಮ ಕೋಳಿ ನಯವಾಗಿ ಅರೆಯಿತು. ಮಧ್ಯೆ ಸಹಾಯಕ್ಕೆ ಕರೆಯಿತು. ಉತ್ತರವಿಲ್ಲದಾಗ ಎದ್ದು ಹೋಗಿ ನೋಡಿತು. ಅಲ್ಲಿ ನೋಡಿದರೆ ಅವುಗಳೆಲ್ಲ ಹಾಯಾಗಿ ನಿದ್ದೆ ಮಾಡಿದ್ದವು. ಅಮ್ಮ ವಾಪಸ್ಸಾಗಿ ಕಡ್ಡಿ, ಪುರುಳೆಗಳನ್ನು ಅರಸಿ ತಂದು ಒಲೆ ಹೂಡಿ ಬೆಂಕಿ ಮಾಡಿತು. ಒಡತಿ ತೊಳೆಯಲೆಂದು ಹಿತ್ತಲಿನಲ್ಲಿಟ್ಟ ಕಾವಲಿ ತಂದು ಒಲೆಗೇರಿಸಿತು. ಪಾತ್ರೆಯಲ್ಲಿ ಹಾಕಿದ ಹಿಟ್ಟು ಸರಿಮಾಡಿ ಹದವಾಗಿ ಬೆರೆಸಿತು. ಇನ್ನು ದೋಸೆ ಹೊಯ್ಯುವುದೇ ಬಾಕಿ. ಆಗಲಾದರೂ ಮಕ್ಕಳು ಸಹಾಯಕ್ಕೆ ಬರುತ್ತವಾ ಎಂದರೆ ಬರಲೇ ಇಲ್ಲ. ಅವುಗಳ ಹೊಟ್ಟೆನೋವು, ತಲೆನೋವು, ಮೈಕೈ ನೋವು ಮುಂದುವರೆದಿತ್ತು. ಈಗ ಚೊಯ್ಯೆಂದು ದೋಸೆ ಹಿಟ್ಟು ಕಾವಲಿಗೆಗೆ ಹಾಕಿ ಹರಡಿದಳು ಅಮ್ಮ. ಹದವಾಗಿ ಬೆಂದು ಘಮ ಘಮ ಬಂದ ದೋಸೆಯನ್ನು ಕಾವಲಿಗೆ ಸಟ್ಟುಗ ಹಾಕಿ ತೆಗೆದು ಬಾಳೆ ಎಲೆಯಲ್ಲಿ ಹರಡಿದಳು. ಪುನಃ ದೋಸೆ ಹಾಕಿದಳು. ಬೆಂದಾಗ ತೆಗೆದಳು. ಒಟ್ಟು ಹನ್ನೆರಡು ದೋಸೆ ಮಾಡಿದಳು. ಅಲ್ಲಿಗೆ ಹಿಟ್ಟು ಮುಗಿಯಿತು. ಮರಿಗಳದು ಗಾಢನಿದ್ದೆ ಇನ್ನೂ. ಬುದ್ಧಿ ಕಲಿಸುತ್ತೇನೆ ಈ ಸೋಮಾರಿ ಮರಿಗಳಿಗೆ ಎಂದು ಅಮ್ಮ ತಾನೆರಡು ದೋಸೆ ತಿಂದಳು. ಉಳಿದ ಹತ್ತು ದೋಸೆಗಳನ್ನು ಮುಚ್ಚಿಟ್ಟಳು ಅವಳು. ಯಥಾಪ್ರಕಾರ ಅಂಗಳದಲ್ಲಿ ಕ್ರಿಮಿ, ಕೀಟಗಳನ್ನು ಹೆಕ್ಕಲು ತೊಡಗಿದಳು.

ಅಷ್ಟು ಹೊತ್ತಾದಾಗ ಮರಿಗಳಿಗೆ ಅನುಮಾನವಾಯಿತು. ಯಾಕಿನ್ನೂ ಅಮ್ಮ ದೋಸೆ ಬಡಿಸಿಕೊಟ್ಟು ಕರೆಯಲಿಲ್ಲ? ಏನಾಯಿತು ಅವಳಿಗೆ? ಆಗಲೇ ಮೂಗಿಗೆ ದೋಸೆಯ ಸುವಾಸನೆ ಅಡರುತ್ತಿತ್ತು. ಆಗಿಲ್ಲವೆ ಇನ್ನೂ? ಮೊದಲ ಮರಿ ಮೆಲ್ಲನೆ ಬಂದು ಇಣಿಕಿತು. ಅಲ್ಲಿ ಏನೂ ಇರಲಿಲ್ಲ. ಅದರ ಹಿಂದೆ ಎರಡನೆಯ ಮರಿ ಬಂತು. ಮೂರನೆಯದು, ನಾಲ್ಕನೇ ಮರಿ, ಎಲ್ಲಕ್ಕಿಂತ ಹಿಂದೆ ಐದನೆ ಮರಿ . ಎಲ್ಲವೂ ತುದಿಗಾಲಿನಲ್ಲಿ ನಿಂತು ನೋಡಿದವು. ಎಲ್ಲೆಲ್ಲೂ ದೋಸೆ ಕಾಣಲಿಲ್ಲ. ಹೊಟ್ಟೆ ಬೇರೆ ಚುರುಗುಡುತ್ತಿತ್ತು. ತಮಗೆ ಸ್ವಲ್ಪವೂ ಕೊಡದೆ ಅಮ್ಮನೇ ಎಲ್ಲವನ್ನು ಗುಳುಂ ಮಾಡಿದ್ದಾಳೆಂದು ತಿಳಿದು ಗೋಳೋ ಎಂದು ಒಟ್ಟಾಗಿ ಅತ್ತವು. ಮರಿಗಳ ಸಾಮೂಹಿಕ ಆರ್ತನಾದ ಕೇಳಿದ ಅಮ್ಮ ಧಾವಿಸಿ ಬಂತು.

'ಏನಾಯ್ತು ಮಕ್ಕಳೇ? ಯಾಕೆ ಅಳ್ತೀರಿ?' ಎಂದು ವಿಚಾರಿಸಿತು. ಮರಿಗಳಲ್ಲಿ ಕೆಲವಕ್ಕೆ ದುಃಖ, ಕೆಲವಕ್ಕೆ ಸಿಟ್ಟು ಮತ್ತೆ ಕೆಲವು ಅಮ್ಮನಿಗೆ ಪುಟ್ಟ ಪುಟ್ಟ ಕೈಗಳಿಂದ ಏಟೂ ಹಾಕಿದವು. ಅಮ್ಮ ತಾಳ್ಮೆಯಿಂದ ಮರಿಗಳ ಬಳಿ ಕಾರಣ ವಿಚಾರಿಸಿತು. 'ನಾವೆಲ್ಲ ಹಸಿದು, ಹಸಿದು ತಿಂಡಿ ತಿನ್ನಲು ಕಾಯುತ್ತಿದ್ದರೆ ನೀನು ಮಾಡಿದ್ದೆಲ್ಲ ನಮಗೆ ಕೊಡದೆ ತಿಂದು ಖಾಲಿ ಮಾಡಿದ್ಯಾಕೆ? ನಾವುಗಳು ಅಮ್ಮ ಈಗ ಕರೆದಾಳು; ಇನ್ನೊಂದು ಘಳಿಗೆಗೆ ಕರೆದಾಳು ಅಂತ ಜೊಲ್ಲು ನುಂಗುತ್ತ ಮಲಗಿದ್ದೆವು. ನೀನು ಕರೆಯಲೇ ಇಲ್ಲ' ಎಂದವು. 'ಅಲ್ಲ ಮರಿಗಳೇ, ನಿಮಗೆಲ್ಲ ಅನಾರೋಗ್ಯ. ಸಹಾಯಕ್ಕೆ ಬನ್ನಿ ಎಂದು ಕರೆದಾಗ ನೀವೆಲ್ಲ ಕಾಲು ನೋವು, ಹೊಟ್ಟೆ ನೋವು, ತಲೆ ನೋವು, ಸುಸ್ತು, ಜ್ವರ ಅಂತ ಕಾರಣ ಹೇಳಿದ್ದು ಮರೆತು ಹೋಯಿತೇ? ಹಾಗಿರುವಾಗ ಕಾಯಿಲೆಯ ಮರಿಗಳಿಗೆ ಉಪವಾಸವಿದ್ದರೆ ಬೇಗ ಗುಣವಾಗುತ್ತದೆ. ಅದಕ್ಕೆ ತಿಂಡಿ ಎಲ್ಲ ನಾನೇ ಮುಗಿಸಿದೆ' ಎಂದಿತು ಅಮ್ಮ ಕೋಳಿ. ಮರಿಗಳಿಗೆಲ್ಲ ನಿರಾಸೆ ತಡೆಯಲಿಲ್ಲ. ಹಸಿವು ಬೇರೆ ಕಾಡುತ್ತಿತ್ತು. ಎಲ್ಲವೂ ಅಮ್ಮನನ್ನು ಅಪ್ಪಿ ಹಿಡಿದು ಪುನಃ ಅತ್ತವು.

'ಮಕ್ಕಳೇ, ನಾನು ನಿಮ್ಮನ್ನು ಸಹಾಯಕ್ಕೆ ಕರೆದಾಗ ಸುಳ್ಳು ಸುಳ್ಳೇ ನೋವು, ಸುಸ್ತು ಎಂಬ ನೆಪ ಹಾಕಿ ಸೋಮಾರಿಗಳಾಗಿ ಕಳ್ಳ ನಿದ್ದೆ ಹೋದಿರಿ. ತಿಂಡಿ ಮಾಡಲು ನೆರವಾಗುವ ಮನಸ್ಸು ಇರಲಿಲ್ಲ ನಿಮ್ಮಲ್ಲಿ. ಅಮ್ಮ ಒಬ್ಬಾಕೆಯೇ ಮಾಡುವಾಗ ಸಹಾಯ ಮಾಡಬೇಕು ಅನ್ನುವ ತಿಳಿವಳಿಕೆ ಇಲ್ಲದ ಮರಿಗಳಿಗೆ ನಾನೇಕೆ ಶ್ರಮಪಟ್ಟು ಮಾಡಿಕೊಡಬೇಕು? ಅಕ್ಕಿ ಆಯ್ದು ತರಲು ಕರೆದರೆ ಬರಲಿಲ್ಲ, ಅರೆಯಲು ನೆರವಾಗಲಿಲ್ಲ; ಕಾವಲಿ ತೊಳೆಯಲು ಬರಲಿಲ್ಲ, ಹೋಗಲಿ, ದೋಸೆ ಮಾಡಿದ ಮೇಲೆ ಹಿಟ್ಟಿನ ಸೌಟು, ಪಾತ್ರೆ ತೊಳೆದುಕೊಡಲು ಮನಸ್ಸು ಮಾಡಿದ ಮರಿಗಳಿಲ್ಲ ನನಗೆ. ನೀವು ಯಾರೂ ನೆರವಾಗದೆ ಇದ್ದ ಮೇಲೆ ನಾನೇಕೆ ನಿಮಗೆ ಮಾಡಿ ಬಡಿಸಬೇಕು? ನಾನು ಮಾಡಿದೆ; ನಾನು ತಿಂದೆ, ತೊಳೆದಿಟ್ಟೆ' ಎಂದು ಅಮ್ಮ ಹೇಳಿತು.

ಮರಿಗಳಿಗೆ ತಮ್ಮ ಸೋಮಾರಿತನ ನೆನೆದು ನಾಚಿಕೆಯಾಯಿತು. ಅಮ್ಮ ಹೇಳಿದ್ದೆಲ್ಲ ಸತ್ಯ ಎಂದು ಮನಸ್ಸಿನಲ್ಲಿ ಒಪ್ಪಿದವು. 'ಅಮ್ಮ, ಇನ್ನು ಮುಂದೆ ನೀನು ಹೇಳಿದ ಕೆಲಸಕ್ಕೆ ಸಹಾಯ ಮಾಡುತ್ತೇವೆ. ಈಗ ನಮಗೆಲ್ಲ ತುಂಬ ಹಸಿವೆಯಾಗುತ್ತದೆ. ನೀನು ಹೇಳಿದ ಹಾಗೆ ನಮ್ಮ ಕುಲದ ಆಹಾರವಾದ ಹುಳು, ಹುಪ್ಪಟೆ ಹುಡುಕಿ ತಿಂದು ಹೊಟ್ಟೆ ತುಂಬಿಸಿಕೊಳ್ಳುತ್ತೇವೆ' ಎಂದು ಮರಿಗಳೆಲ್ಲ ಸಪ್ಪೆ ಮುಖದಿಂದ ಮುಂದಕ್ಕೆ ಕೊಕ್, ಕೊಕ್, ಕೊಕ್ ಕೊಕ್ ಎನ್ನುತ್ತ ಕಾಲಿಟ್ಟವು.

ಅಮ್ಮ ಕೋಳಿ ಆಗ ಮುಚ್ಚಿಟ್ಟ ದೋಸೆಯನ್ನು ತೆಗೆದು ಐದೂ ಮರಿಗಳಿಗೆ ಹಂಚಿ ಕೊಟ್ಟಿತು. ಮರಿಗಳು ಘಮಗುಡುವ ಬೆಳ್ಳಗಿನ ದೋಸೆಯನ್ನು ಚೂರು ಚೂರೇ ಮುರಿದು ಬಾಯಿಗಿಟ್ಟು ಸವಿ ಸವಿಯಾಗಿ ತಿಂದವು. ನಂತರ ಅಮ್ಮ ಮುಂದೆ ಮುಂದೆ ಹೋದಾಗ ಬಾಲದ ಹಾಗೆ ಹಿಂದೆ ಹಿಂದೆ ಶಿಸ್ತಿನಿಂದ ನಡೆದವು. 'ನೀ ನನಗಿದ್ದರೆ ನಾ ನಿನಗೆ' ಅಂತ ಅಮ್ಮ ಹೇಳಿಕೊಟ್ಟಿತು.

**– ಕೃಷ್ಣವೇಣಿ ಕಿದೂರ್**



# ಉರಿ ಮಾರಿ ಸೂರ್ಯ

ಅಯ್ಯೋ ಅಮ್ಮಾ ತಾಳಲಾರೆವು
ಇಂತಹ ಬಿಸಿಲ ತಾಪ
ಅದೇಕೆ ಹೀಗೆ ಸೂರ್ಯ ನಿನಗೆ
ನಮ್ಮ ಮೇಲೆ ಕೋಪ?

ಮಕ್ಕಳ ಕಂಡರೆ ಅಕ್ಕರೆ ಇಲ್ಲವೆ
ಸೂರ್ಯ ನಿನಗೇಕಿಂತ ಮುನಿಸು
ಗೆಳೆಯರು ಸೇರಿ ಆಡಬೇಕೆಂದೆವು
ಚೂರಾಯ್ತು ನಮ್ಮಯ ಕನಸು

ಬೆಳ ಬೆಳಗ್ಗೇನೆ ಧುಮು ಧುಮು ಎಂದು
ಮುಖವನು ಉರಿಸುವಿ ಏಕೆ?
ಹೊರಗಡೆ ಬಾರದೆ ಮನೆಯಲಿ ನಾವು
ಕುಳಿತರೆ ನಿನಗದೇ ಸಾಕೆ?

ಬ್ಯಾಟು ಬಾಲು ಎಲ್ಲಾ ಒಯ್ದು
ಮೂಲೇಲಿಟ್ಟಿದ್ದಾಯ್ತು
ತೋಟ ಗದ್ದೆ ಸುತ್ತೊ ಬಯಕೆ
'ಠುಸ್' ಆಗಿ ಹೋಯ್ತು

ರಜಾ ದಿನಗಳು ಕರಗಿ ಹೋಗುತಿವೆ
ಎನ್ನುವ ಕಳವಳ ಮನದಲ್ಲಿ
ಮಜಾ ಮಾಡಲು ಅಡ್ಡಿ ಮಾಡುವಿ
ಕೋಪವಿದೆ ನಮ್ಮ ಎದೆಯಲ್ಲಿ

ಬೆಂಕಿಯ ಬಿಸಿಲು ನೆತ್ತಿಯ ಮೇಲೆ
ಸುರಿದರೂ ಹೆದರವು ನಿನಗೆ
ಅಮ್ಮನ ಮಾತಿಗೆ ಮಣಿವೆವು ನಾವು
ಮನೆಯಲ್ಲಿರುವೆವು ಸುಮ್ಮಗೆ!

**–ಅರುಣಾ ನರೇಂದ್ರ, ಕೊಪ್ಪಳ**